ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ರವರ ನ್ಯಾಯಾಲಯ,
ಚಿಕ್ಕಮಗಳೂರು.

ದಿನಾಂಕಃ 4-06-2025

ಸಿ.ಸಿ.ನಂ.1149/2024

ಪಿರ್ಯಾದುದಾರರು ಃ ರಾಜ್ಯದ ಪರವಾಗಿ ನಗರ ಠಾಣಾ ಪೊಲೀಸರು,
ಚಿಕ್ಕಮಗಳೂರು.

ವಿರುದ್ಧ

ಆರೋಪಿ ಃ ಆಸಿಫ್ ಬಿನ್ ಇಲಿಯಾಸ್
35 ವರ್ಷದ ಕೂಲಿ
ವಾಸ ಸಂತೆ ಮಾರ್ಕೆಟ್
ಚಿಕ್ಕಮಗಳೂರು .

## ಆರೋಪಣೆ

ದಿನಾಂಕಃ 8.10.2024 ರಂದು ಸಂಜೆ 5.30 ಗಂಟೆ ಸಮಯದಲ್ಲಿ, ಚಿಕ್ಕಮಗಳೂರು ನಗರದ ಸಂತೆ ಮಾರ್ಕೆಟ್ ನ ಸಾರ್ವಜನಿಕ ಸ್ಥಳದಲ್ಲಿ ಆರೋಪಿಯಾದ ನೀವು, 1 ರೂಪಾಯಿಗೆ 80 ರೂಪಾಯಿ, 10 ರೂಪಾಯಿಗೆ 800 ರೂಪಾಯಿ ಎಂದು ಮಟ್ಕಾ ಜೂಜಾಟಕ್ಕೆ ಪ್ರಚೋದನೆ ಮಾಡಿ, ಸಾರ್ವಜನಿಕರಿಂದ ಹಣವನ್ನು ಸಂಗ್ರಹಿಸಿ ಮಟ್ಕಾ ಜೂಜಾಟ ಆಡಿಸುತ್ತಿದ್ದು , ಆ ಮೂಲಕ ನೀವು ಕರ್ನಾಟಕ ಪೊಲೀಸ್ ಕಾಯ್ದೆ ಕಲಂ.78(3) ರ ರೀತ್ಯಾ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ವಿರುದ್ಧ ಈ ಆರೋಪಣೆ ಹೊರಿಸಲಾಗಿದೆ.

1. ಈಗ ಓದಿ ಹೇಳಿದ ಆರೋಪಣೆ ನಿಮಗೆ ಅರ್ಥವಾಯಿತೇ?

ಉತ್ತರಃ ತಿಳಿಯಿತು

2. ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ನಿಮಗೆ ಏನಾದರೂ ಪ್ರತಿರಕ್ಷೆ ಇದೆಯೇ?

ಉತ್ತರಃ ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕು

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ, ವಿವರಿಸಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ.

ಸಹಿ

( ಕುಮಾರಿ ಸುಜಾತ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ., ಚಿಕ್ಕಮಗಳೂರು.